**PCR 25/2026**
**CW.1**

**ದಿಃ 16.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಸಾಕ್ಷಿಯ ಮುಂದುವರೆದ ಪ್ರಮಾಣೀಕೃತ ಹೇಳಿಕೆಃ**

ನನ್ನ ಮದುವೆಯ ಫೋಟೋಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಸಿ-12 ಮತ್ತು 13 ಎಂದು, ನನ್ನ ಮಗುವಿನ ಫೋಟೋಗಳನ್ನು ಕ್ರಮವಾಗಿ ನಿಸಿ-14 ಮತ್ತು 15 ಎಂದು, 1 ನೇ ಆರೋಪಿಯು 2 ನೇ ಆರೋಪಿಯನ್ನು ಮದುವೆಯಾಗಿರುವ ಫೋಟೋವನ್ನು ನಿಸಿ-16 ಎಂದು, 1 ನೇ ಮತ್ತು 2 ನೇ ಆರೋಪಿಯು ಒಟ್ಟಿಗೆ ಇರುವ ಫೋಟೋವನ್ನು ನಿಸಿ-17 ಎಂದು, 2 ಸಿ.ಡಿ.ಗಳನ್ನು ಕ್ರಮವಾಗಿ ನಿಸಿ-18 ಮತ್ತು 19 ಎಂದು ಗುರುತಿಸಲಾಯಿತು. ಈ ಎಲ್ಲಾ ಫೋಟೋಗಳನ್ನು ನಾನು ನನ್ನ ಮೊಬೈಲ್ ನಲ್ಲಿ ಇಟ್ಟುಕೊಂಡಿದ್ದು, ಅವುಗಳನ್ನು ಸಿ.ಡಿ.ಯಲ್ಲಿ ವರ್ಗಾಯಿಸಿರುತ್ತೇನೆ. ಅದಕ್ಕೆ ಸಂಬಂಧಿಸಿದಂತೆ ಭಾರತೀಯ ನ್ಯಾಯ ಸಾಕ್ಷ್ಯ ಅಧಿನಿಯಮ ಕಲಂ 63(4)(ಸಿ) ರಡಿ ಪ್ರಮಾಣಪತ್ರವನ್ನು ಕೊಟ್ಟಿರುತ್ತೇನೆ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನ ರೀತ್ಯಾ ಬೆರಳಚ್ಚುಗಾರರಿಂದ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಅದೆ**

**ಅಪರ ಸಿವಿಲ್ ನ್ಯಾ. ಮತ್ತು**
**ಜೆ.ಎಂ.ಎಫ್.ಸಿ, ದೊಡ್ಡಬಳ್ಳಾಪುರ**